1. ಕರ್ನಾಟಕ ಲೋಕಾಯುಕ್ತದ 2000-2001ನೇ ಸಾಲಿನ (ದಿನಾಂಕ 1-4-2000 ರಿಂದ 31-6-2001ರವರೆಗಿನ) ಹದಿನೈದನೆಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಮತ್ತು ಪರಿಸರ ಸಚಿವರು) : ಮಾನ್ಯ ಅಧ್ಯಕ್ಷರೇ

1974ರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಕಾಯ್ದೆಯ ಕಂಡಿಕೆ 39(2)ರನ್ವಯ:

2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 2000-2001ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

6. ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ.

ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 7ನೇ ಆಗಸ್ಟ್, 2002ರಂದು ಯಾವುದೇ ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2002.
2. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ, 2002.
3. ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ (ತಿದ್ದುಪಡಿ) ವಿಧೇಯಕ, 2002.
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಇತರ ಕಾನೂನಿನ (ತಿದ್ದುಪಡಿ) ವಿಧೇಯಕ, 2002.
5. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2002.
6. ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2002.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಭೀಮಾ ನದಿ ಬಗ್ಗೆ ಪ್ರಸ್ತಾಪ ಆಗಬೇಕಾಗಿದೆ. ಅದಕ್ಕೆ ಒಂದು ಸಮಯ ನಿಗದಿ ಮಾಡಬೇಕು.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಪ್ರಸ್ತಾಪಕ್ಕೆ ಅವಕಾಶ ಕೊಡುತ್ತೇನೆ. ವಿಷಯ ನನಗೆ ಗೊತ್ತಿದೆ. ಪತ್ರಿಕೆಯಲ್ಲಿ ಪೇಪರ್ ಓದಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಭೀಮಾ ನದಿ ಬಗ್ಗೆ ಬಹಳಷ್ಟು ತೊಂದರೆ ಆಗಿದೆ.

ಅಧ್ಯಕ್ಷರು : ಇದು ತುಂಬಾ ಒಳ್ಳೆಯ ಸಬ್ಜೆಕ್ಟ್.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕೆ ಪ್ರಾಶಸ್ತ್ಯದ ಮೇಲೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಇವತ್ತೇ ನಾನು ಆ ವಿಷಯದ ಬಗ್ಗೆ ಅಲೋ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನಗೆ ನೋವು ಬಂದ ಸಂಗತಿ. ಅದೇನೆಂದರೆ ನಿನ್ನೆಯೆಲ್ಲಾ ಅಧಿವೇಶನ ಬಂದ್ ಮಾಡಿ ಕೋಟಿಗಟ್ಟಲೆ ದುಡ್ಡು ಹಾಳು ಮಾಡಿದ್ದೇವೆ. ಇವತ್ತೇಕೆ ಸದನ ಚಾಲೂ ಆಯಿತು? ಅದಕ್ಕೇ ನಾನು ಹೇಳುತ್ತಿದ್ದೇನೆ. ಈ ರೀತಿ ಹಾಳು ಮಾಡಿದ್ದಕ್ಕೆ ತಾವು ಯಾರಿಗೆ ಶಿಕ್ಷೆ ಮಾಡುತ್ತೀರಿ ಎನ್ನುವುದರ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಇದೂ ಇಲ್ಲದೇ ಹೋದರೆ ನಿನ್ನೆ ಸುಮ್ಮನೆ ಏನೂ ಇಲ್ಲದೆ ಒಂದು ಕೋಟಿ ರೂಪಾಯಿ ಹಾಳು ಮಾಡಿದ್ದೇವೆ. ಈ ರಾಜ್ಯದ ಮಣ್ಣಿನ ಮಕ್ಕಳ ತೆರಿಗೆಯ ಹಣವನ್ನು ಹಾಳು ಮಾಡಿದ್ದೇವೆ. ಇದಕ್ಕೆ ಯಾರೂ ಜವಾಬ್ದಾರರೂ ಇವತ್ತು ಏಕ್‌ದಂ ಸದನ ಏಕೆ ಚಾಲೂ ಆಯಿತು? ನಿನ್ನೆಯೇ ಇದನ್ನು ಮಾಡಿದ್ದರೆ?

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಈಗ ಸದನ ಸರಿಯಾಗಿ ನಡೆಯಬಾರದು ಎಂದು ಇವರ ಅಭಿಪ್ರಾಯವಾ ಹೇಳಿ. ನಿನ್ನೆ ಹಾಗೆಯೇ ಇವತ್ತು ಆಗಬೇಕೆಂದು ನೀವು ಬಯಸುತ್ತೀರಾ? ಅದು ನಿಮ್ಮ ಭಾವನೆಯೇ?

ಅಧ್ಯಕ್ಷರು : ನಾನು ಅದಕ್ಕೆ ಉತ್ತರ ಹೇಳುತ್ತೇನೆ. ಮಾನ್ಯ ಸಭಾಪತಿಯವರೆ, ತಾವು ಕುಳಿತುಕೊಳ್ಳಿ. ರೂಲ್ಸ್ ಕಮಿಟಿ ಹೊಸದಾಗಿ ಆಗಿದೆ. ನಮ್ಮ ರೂಲ್ಸ್‌ನಲ್ಲಿ ಏನೇನು ಇದೆ ಅದರ ಅಮೆಂಡ್‌ಮೆಂಟ್ಸ್ ಬಗ್ಗೆ ನಾವೊಂದು ಕಮಿಟಿ ಮಾಡಿದ್ದೇವೆ. ಕಮಿಟಿಯ ಮೊದಲನೇ ಸಭೆ ನಡೆದಿದೆ. ಎರಡನೇ ಸಭೆ, ಮೂರನೆಯ ಸಭೆ, ನಾಲ್ಕನೆಯ ಸಭೆಗಳಲ್ಲಿ ಈ ರೂಲ್ಸನ್ನು ನಾವು ಛೇಂಜ್ ಮಾಡೋಣ. ಆಗ ಅದನ್ನು ಇನ್‌ಕಾರ್ಪೊರೇಟ್ ಮಾಡಿ ಆ ರೂಲ್ಸ್ ಕಮಿಟಿಯವರು ಏನು ಮಾಡುತ್ತಾರೋ ನೋಡೋಣ. ರೂಲ್ಸ್ ಕಮಿಟಿಯಲ್ಲಿ ಎಲ್ಲಾ ಪಕ್ಷದವರೂ ಇದ್ದಾರೆ. ಆ ರೂಲ್ಸ್ ಕಮಿಟಿಯವರು ಏನು ಮಾಡುತ್ತಾರೆ ಅದರ ಪ್ರಕಾರ ಮುಂದುವರಿಸುವುದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ : ಸಾರ್ ಒಂದು ಸಬ್‌ಮಿಷನ್ ಇದೆ.

ಅಧ್ಯಕ್ಷರು : ಈಗ ಬೇಡ, ಒಬ್ಬರು ಮಾತನಾಡಿದರೆ ಎಲ್ಲರೂ ಅವಕಾಶ ಕೇಳುತ್ತಾರೆ.

7. ಶಾಸನ ರಚನೆ:

2002ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ

ಅ. ಪರ್ಯಾಲೋಚನಾ ಪ್ರಸ್ತಾಪ

+ **ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವಾರ್ತಾ ಇಲಾಖಾ ಸಚಿವರು) :** ಮಾನ್ಯ ಅಧ್ಯಕ್ಷರೆ, "ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 2002ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನ ಬೇಕೆಂದು ಕೋರುತ್ತೇನೆ."

ಪ್ರಸ್ತಾವನೆ ಮಂಡಿಸಲಾಯಿತು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನಿಗೆ ಹಿಂದಿನ ಸಿಟಿ ಇಂಪ್ರೂಮೆಂಟ್‌ಟ್ರಸ್ಟ್ ಬೋರ್ಡ್ ಆಕ್ಟ್‌ಗೆ ತಿದ್ದುಪಡಿ, ಮಾಡತಕ್ಕ, ಮಸೂದೆ. ಇದರ ಉದ್ದೇಶ ಏನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಾಣ ಮಾಡಿದಂತಹ ಪ್ರದೇಶದಲ್ಲಿ ಅದಕ್ಕೆ ಬೇಕಾದಂತಹ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಕೋಡತಕ್ಕಂಥ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ಆ ಕಾರಣಕ್ಕಾಗಿ ಆ ಪ್ರದೇಶದ ಜಮೀನು ಮತ್ತು ಮನೆಗಳ ಮೇಲೆ ಕಂದಾಯ ಮತ್ತು ಸೆಸ್ ವಗೈರೆ ತೆರಿಗೆಗಳನ್ನು ಹಾಕತಕ್ಕ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದೆ. ಈ ಕ್ರಮ ಸರಿ ಅಲ್ಲ ಎಂದು ಹೇಳಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ ಹಿನ್ನೆಲೆಯಲ್ಲಿ ಪ್ರಾಧಿಕಾರಕ್ಕೆ ತೆರಿಗೆ ಹಾಕತಕ್ಕಂಥ ಅಧಿಕಾರ ಇಲ್ಲ ಎಂದು ಹೇಳಿ ಒಂದು